ಪರಿಸ್ಥಿತಿ ಬರುತ್ತಿರಲಿಲ್ಲ. ಜೇಪ್ಪತಾಪಟ್ಟಿಯಂನ್ನು ತಯಾರಿ ಮಾಡಬೇಕಾದರೂ ಪ್ರಮೋಷನ್ ಆಧಾರದ ಮೇಲೆ ಭರ್ತಿ ಮಾಡಬೇಕೆಂಬುದು ಒಂದು ಗುಂಪು, ಮತ್ತು ನೇರವಾಗಿ ಪ್ರೊಬೆಷನರೀಗಳನ್ನು ತೆಗೆದು ಕೊಳ್ಳಬೇಕೆಂದು ಹೇಳುವವರು ಇನ್ನೊಂದು ಗುಂಪು, ಈ ಎರಡು ಗುಂಪುಗಳ ಮಧ್ಯೆ ಇರತಕ್ಕಂತಹ ಅಭಿಪ್ರಾಯ ಬೇಧಗಳನ್ನು ಸರಿಪಡಿಸುವುದಕ್ಕೆ ಸ್ವಲ್ಪ ದಿವಸ ತಡವಾಯಿತು. ಮಂತ್ರಿ ಇದನ್ನು ಸರಿಪಡಿಸಿ ಡಿ.ಪಿ.ಎ.ಆರ್. ಗೆ ಕಳುಹಿಸಿದ್ದೆವು. ಅಲ್ಲಿ ಸ್ವಲ್ಪ ದಿವಸ ತಡವಾಯಿತು. ನಾನು ಅಧಿಕಾರಕ್ಕೆ ಬಂದ ಮೇಲೆ ಸಂಬಂಧಪಟ್ಟವರ ಜೊತೆಯಲ್ಲಿ ಚರ್ಚೆನಡೆಸಿ, ಇವತ್ತು ಅದರಅಂತಿಮ ಪಟ್ಟಿಯನ್ನು ತೀರ್ಮಾನ ಮಾಡಿ ಪ್ರಕಟಿಸಿದ್ದೇವೆ. ಎಲ್ಲರಿಗೂ ಅದರಲ್ಲಿ ನ್ಯಾಯ ದೊರಕಿದೆ. ಸಾಧ್ಯವಾದ ಮಟ್ಟಿಗೆ, ಹೈಕೋರ್ಟು ಕೊಟ್ಟಂತಹ ತೀರ್ಪನ್ನು ಆಧಾರವಾಗಿಟ್ಟುಕೊಂಡು ಮಾಡಿದ್ದೇವೆ. ಆ ಜೇಪ್ಪತಾ ಪಟ್ಟಿ ಪ್ರಕಾರ ಖಾಲಿ ಇರತಕ್ಕಂತಹ ಜಾಗಗಳನ್ನು ಕೂಡಲೇ ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಧಾರವಾಡದಲ್ಲಿ ಶೀತಾಗಾರ ನಿರ್ಮಿಸುವ ಬಗ್ಗೆ

೬೩ (೫೭) ಶ್ರೀ ಸಿ. ವಿ. ಪುಡಕಲಕಟ್ಟಿ (ಧಾರವಾಡ ಗ್ರಾಮಾಂತರ) .— ಮಾನ್ಯ ಪಶು ಸಂಗೋಪನಾ ಪಶುವೈದ್ಯ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದಲ್ಲಿ ಶೀತಾಗಾರವನ್ನು ನಿರ್ಮಿಸುವ ಬಗ್ಗೆ ಸಲಹೆ ಸರಕಾರದವಲ್ಲಿಯೇ ?

ಆ) ಮತ್ತು ಇದನ್ನು ನಿರ್ಮಿಸುವಲ್ಲಿ ಅಡ್ಡಿ ಆತಂಕಗಳೇನಾದರೂ ಇವೆಯೇ ಹಾಗೂ ಇದನ್ನು ಯಾವಾಗ ಪೂರ್ಣಗೊಳಿಸಲಾಗಿವುದು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೋಪನಾ ಮತ್ತು ತೋಟಗಾರಿಕೆ) ,—

ಅ) ಹೌದು.

ಆ) ಶೈತ್ಯಾಗಾರ ನಿರ್ಮಾಣ ಯೋಜನೆಗೆ ಬೇಕಾದ ಒಂದು ಎಕರೆ ಜಮೀನನ್ನು ಖರೀದಿಸಿದ ಪ್ರಯುಕ್ತ ಹಾಗೂ ಯೋಜನೆಯ ಬಗ್ಗೆ ತಯಾರಿಸಿದ ಸಿ.ಎಫ್.ಟಿ.ಆರ್. ಐ (ಕೇಂದ್ರೀಯ ಆಹಾರ ಸಂಶೋಧನಾಸಂಸ್ಥೆ) ಮೈಸೂರು ಅವರ ವರದಿಯು ದೊರಕಿರುವುದರಿಂದ ಯೋಜನೆಯ ಬಗ್ಗೆ ಇದ್ದ ಕೆಲವೊಂದು ಅಡ್ಡಿ ಆತಂಕಗಳು ನೀಗಿದಂತಾಗಿದೆ. ಪ್ರಕೃತ ಈ ಯೋಜನೆಯನ್ನು ವಿಶ್ವ ಬ್ಯಾಂಕಿನ ನೆರವಿನಿಂದ ಪೂರೈಸುವ ಇಂಟಿಗ್ರೇಟೆಡ್ ಡೆವಲಪ್ ಮೆಂಟ್ ಆಫ್ ಹಾರ್ಟಿಕಲ್ಚರ್ ಯೋಜನೆಯಲ್ಲಿ ತೆಗೆದುಕೊಳ್ಳಬಹುದೇ ಎಂಬಿತ್ಯಾದಿ ಪ್ರಶ್ನೆಗಳು ಪರಿಶೀಲನೆಯಲ್ಲಿರುವುದರಿಂದ ಆ ಬಗ್ಗೆ ಅಂತಿಮ ನಿರ್ಧಾರವನ್ನು ಆಲೋಚಿಸಿ ಕೈಗೊಳ್ಳಲಾಗುವುದು.

ಶ್ರೀ ಪಿ. ಪುಡುಕಲಕಟ್ಟಿ.—ಸ್ವಾಮಿ, ತಾವು ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಹೌದು ಅಂತ ಹೇಳಿದ್ದೀರಿ ಮತ್ತು ಇದೇ ಪ್ರಶ್ನೆಯ (ಆ)ಗೆ ಉತ್ತರವಾಗಿ ಶೈತ್ಯಾಗಾರ ನಿರ್ಮಾಣ ಯೋಜನೆಗೆ ಬೇಕಾದ ಒಂದು ಎಕರೆ ಜಮೀನನ್ನು ಖರೀದಿಸಿದ ಪ್ರಯುಕ್ತ ಹಾಗೂ ಯೋಜನೆಯ ಬಗ್ಗೆ ತಯಾರಿಸಿದ ಸಿಎಫ್‌ಟಿಆರ್‌ಐ (ಕೇಂದ್ರೀಯ ಆಹಾರ ಸಂಶೋಧನಾ ಸಂಸ್ಥೆ) ಮೈಸೂರು ಅವರ ವರದಿಯೂ ದೊರಕಿರುವುದರಿಂದ ಯೋಜನೆಯ ಬಗ್ಗೆ ಇದ್ದ ಕೆಲವೊಂದು ಅಡ್ಡಿ ಆತಂಕಗಳು ನೀಡಿದಂತಾಗಿದೆ. ಪ್ರಕೃತ ಈ ಯೋಜನೆಯನ್ನು ವಿಶ್ವ ಬ್ಯಾಂಕಿನ ನೆರವಿನಿಂದ ಪೂರೈಸುವ ಇಂಟಿಗ್ರೇಟೆಡ್ ಡೆವಲಪ್ ಮೆಂಟ್ ಆಫ್ ಹಾರ್ಟಿಕಲಚರ್ ಯೋಜನೆಯಲ್ಲಿ ತೆಗೆದುಕೊಳ್ಳಬಹುದೇ ಎಂಬಿತ್ಯಾದಿ ಪ್ರಶ್ನೆಗಳು ಪರಿಶೀಲನೆಯಲ್ಲಿರುವುದರಿಂದ ಈ ಬಗ್ಗೆ ಅಂತಿಮ ನಿರ್ಧಾರವನ್ನು ಆಲೋಚಿಸಿ ಕೈಕೊಳ್ಳಲಾಗುವುದು ಅಂತ ಹೇಳಿದ್ದೀರಿ. ಇನ್ನು ಎಷ್ಟು ದಿವಸದೊಳಗೆ ಈ ಯೋಜನೆಯ ಅಂತಿಮ ನಿರ್ಧಾರ ತೆಗೆದು ಕೊಂಡು ಇದನ್ನು ಮುಗಿಸುತ್ತೀರಾ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ನಾನು ತಮಗೆ ಮೊದಲೇ ಇದು ಪರಿಶೀಲನೆಯಲ್ಲಿದೆ ಎಂದೂ, ಹೇಳಿದ್ದೇನೆ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಅಥಾರಿಟಿಯವರು ಇದರ ಬಗ್ಗೆ ತೀರ್ಮಾನ ಮಾಡಿದ ಮೇಲೆ ಈ ಯೋಜನೆಯನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು.—ಶ್ರೀ ಪಂಪಾತಿ ಇವರ ೬೬ (೫೯) ಪ್ರಶ್ನೆಯನ್ನು ಮುಂದೆ ಅರ್ಧಗಂಟಿಕಾಲದ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಮಾನ್ಯ ಮಂತ್ರಿಗಳು ಒಪ್ಪಿರುವುದರಿಂದ ಈ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಗಳು ಹಾಗೆ ಒಪ್ಪಿಕೊಂಡ ಮೇಲೆ ನನ್ನ ಅಭ್ಯಂತರ ಏನೂ ಇಲ್ಲ. ಮುಂದೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತಲ್ಲ.

ಶ್ರೀ ಎನ್. ಜಿ. ನಾಯಕ್.—ಅಧ್ಯಕ್ಷರೇ, ನನ್ನ ಪ್ರಶ್ನೆಯನ್ನು ಕಳೆದ ೩ ದಿವಸದಿಂದಲೂ ಕೇಳದೆ ಲ್ಯಾಪ್ಸ್ ಆಗುತ್ತಾ ಇದೆ.

ಅಧ್ಯಕ್ಷರು.—ನೀವು ಸೀಟಿನಲ್ಲಿ ಇರಲಿಲ್ಲ, ಆದರಿಂದ ನೀವು ಕೇಳಲಿಲ್ಲಾ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಲೋಕೋಪಯೋಗಿ ಇಲಾಖೆಯ ೩೬ ನಾಮಿರ ಕಾರ್ಮಿಕರು ತಮ್ಮ ಬೇಡಿಕೆಗಳ ಬಗ್ಗೆ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರ ಬಗ್ಗೆ ರೂಲ್ ೬೮ರ ಪ್ರಕಾರ ನಾನು ಒಂದು ನೋಟೀಸ್ ಅನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ವಿ. ಎಸ್. ಆಚಾರ.—ಸ್ವಾಮಿ, ಈ ಪ್ರಶ್ನೆ ಪಟ್ಟಿಯಲ್ಲಿರತಕ್ಕಂಥಾ ಸೀರಿಯಲ್ ನಂಬರ್‌ಗಳನ್ನು ನೋಡಿದರೆ ತಾವು ಯಾವ ಆಲ್‌ಫಬೆಟಿಕಲ್ ಪ್ರಕಾರ ಕಳಂಹಿಸುತ್ತೀರಿ ಅನ್ನುವುದು ಗೊತ್ತಾಗುವುದಿಲ್ಲ. ಏತಕ್ಕೆಂದರೆ ಪ್ರತಿದಿವಸ ಶ್ರೀ ಗಂಗಣ್ಣ ಅವರ ಪ್ರಶ್ನೆ ಮೇಲೆ ಬರುತ್ತದೆ, ಕೊನೆಯಲ್ಲಿ ನನ್ನದು, ಶ್ರೀ ಪಂಪಾತಿಯವರದ್ದು, ಶ್ರೀ ಎಂ.ಎಸ್. ಕೃಷ್ಣನ್ ಅವರದ್ದು ಬರುತ್ತದೆ. ನಮ್ಮದೆಲ್ಲಾ ಕೊನೆಗೆ ಬರುತ್ತದೆ. ಯಾವ ಆಲ್‌ಫಬೆಟಿಕಲ್ ಪ್ರಕಾರ ಈ ರೀತಿ ಬರುತ್ತಾ ಇದೆ ಅನ್ನುವುದನ್ನು ಹೇಳುತ್ತೀರಾ ?

ಅಧ್ಯಕ್ಷರು.—ನಾವು ನಿಯಮವನ್ನು ಬಿಟ್ಟು ಹೋಗುವುದಿಲ್ಲ. ಯಾವಾಗಲೂ ತಾವು ಎಲ್ಲಾ ಪ್ರಶ್ನೆಗಳಿಗೂ ಉಪಪ್ರಶ್ನೆಗಳನ್ನು ಕೇಳುತ್ತಿದ್ದೀರಲ್ಲಾ, ಅದು ಸರಿಯೇ ಅನ್ನುವುದನ್ನು ನಿಮ್ಮನ್ನು ನೀವೇ ಪ್ರಶ್ನೆ ಮಾಡಿಕೊಳ್ಳಿ, ಆಗ ಗೊತ್ತಾಗುತ್ತದೆ.

ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು

ವಿಷಯ : ರಾಜಾಜಿನಗರದಲ್ಲಿ ಒಂದು ಪಶುವೈದ್ಯ ಶಾಲೆ ಕಟ್ಟಡವನ್ನು ಕಟ್ಟುವ ಬಗ್ಗೆ.

ಪ್ರ. ೬೭ (೯೯) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಪಶುಸಂಗೋಪನ ಪಶು ವೈದ್ಯ ಸೇವೆ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜಾಜಿನಗರದ ನಿವಾಸಿಗಳಿಂದ ಮತ್ತು ತಾಸಕರಿಂದ ಅಲ್ಲಿ ಒಂದು ಪಶುವೈದ್ಯ ಶಾಲೆಯ ಕಟ್ಟಡವನ್ನು ಕಟ್ಟುವ ವಿಷಯವಾಗಿ ಅರ್ಜಿಗಳು ಬಂದಿವೆಯು :

(ಆ) ನಿವೇಶನ ತಪಾವಣೆಯನ್ನು ನಗರ ಕಾರ್ಪೊರೇಷನ್ ಕಮಿಷನರ್‌ರವರು ಮಾಡಿದ್ದಾರೆಯು :

(ಇ) ಪಶುವೈದ್ಯ ಶಾಲೆಯ ಕಟ್ಟಡವನ್ನು ಕಟ್ಟಲು ಕಾರ್ಪೊರೇಷನ್ ರವರು ಮಂಜೂರಾತಿ ಯನ್ನು ನೀಡಿದ್ದಾರೆಯೇ :

(ಈ) ಕಾಮಗಾರಿ ಕೆಲಸವನ್ನು ತಕ್ಷಣ ತೆಗೆದುಕೊಳ್ಳುವರೆ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಳ್ (ಪಶುಸಂಗೋಪನಾ ಪಶುವೈದ್ಯ ಸೇವೆ ಮತ್ತು ತೋಟಗಾರಿಕೆ ಮಂತ್ರಿಗಳು).—

(ಅ) ಹೌದು

(ಆ) ಇಲ್ಲ

(ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.